# ನವಿಲುಗನ್ನಡಿ

ಫೆಬ್ರುವರಿ ಸಂಚಿಕೆಯ ಎಲ್ಲ ಕತೆಗಳು ಚೆನ್ನಾಗಿವೆ. ಮುಖಪುಟ ಹೊಸ ಬಗೆಯ ಕಲೆಯಿಂದಾಗಿ ಗಮನ ಸೆಳೆಯಿತು.

ಕೆ.ವಿ. ತಿರುಮಲೇಶ್ ಅವರ 'ಅನೇಕ: ದ ಮಾರ್ಜಿನಲ್ ಮ್ಯಾನ್' ಕತೆ ಹೊಸ ತಂತ್ರ, ನಿರೂಪಣೆದಿಂದ ಕೂಡಿದೆ. ವರ್ತಮಾನದ ವ್ಯಕ್ತಿಗಳ ವಿಚಿತ್ರ ವರ್ತನೆ, ನಿಲುವು, ನಡವಳಿಕೆಗಳನ್ನು ವ್ಯಂಗ್ಯವಾಗಿ ನೋಡುತ್ತದೆ.

ಕುಪ್ಪಿಲಿ ಪದ್ಮ ಅವರ ಕತೆ 'ಅಜೇಯ'ದ ಓದು ಮುಗಿದಾಗ ಒಂದು ಕ್ಷಣ ಶೂನ್ಯ ಆವರಿಸುತ್ತದೆ. 'ಮಾಯಿ' ಕತೆ ಕಡೆಯಲ್ಲಿ ಆರ್ದ್ರಗೊಳಿಸಿದರೂ ಹೊಸತನವಿಲ್ಲ.

ಪುಷ್ಪಾ ಕುದೇರು, ಮೈಸೂರು

ವೈವಿಧ್ಯಮಯ ಬರಹಗಳ ಮತ್ತು ಸಂಗ್ರಹಯೋಗ್ಯ ಸಂಚಿಕೆಯು ತನ್ನ ಮುದ್ದಾದ ಮುಖಪುಟದೊಂದಿಗೆ ಮನ ಸೆಳೆಯಿತು.

ಮೋಹನ ರು. ಹಣಗಿ, ಅಮೀನಗಡ


ವಸುಮತಿ ಉಡುಪ ಅವರ 'ಬಾಕಿ ಸಂಗ್ತಿ ಮೊಕ್ತಾ' ಕತೆ ಸದ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ವೃದ್ಧರ ಪರಿಸ್ಥಿತಿಯನ್ನು ಚೆನ್ನಾಗಿ ಚಿತ್ರಿಸಿದೆ. ಚಿರಪರಿಚಿತ ಪದ ಗುಚ್ಛವಾದ ಕತೆಯ ಶೀರ್ಷಿಕೆಯನ್ನು ಓದಿ ತುಂಬಾ ಸಂತಸವೆನಿಸಿತು.

ಎಸ್.ಆರ್. ರಾವಳರ ಲಲಿತ ಪ್ರಬಂಧ 'ಜೋಡು ಪುರಾಣ' ಓದಿದಾಗ ಪುರಂದರ ದಾಸರ ಕೀರ್ತನೆ 'ಪಾಪೋಸು ಹೋಯಿತಲ್ಲ ಎನ್ನ ಪಾಪೋಸು ಹೋಯಿತಲ್ಲ' ನೆನಪಿಗೆ ಬಂತು.

ವೃಂದಾ ಸಿ.ಎಂ., ಬೆಂಗಳೂರು

ಎಸ್.ಆರ್. ರಾವಳರವರ 'ಜೋಡು ಪುರಾಣ' ಲಲಿತ ಪ್ರಬಂಧ ಶರವೇಗದಲ್ಲಿ ಓದಿಸಿಕೊಂಡಿತು.

'ಮೊಹರು', ಇಲಕಲ್ಲ



ಈ ಸಂಚಿಕೆಯ ಬರಹಗಳು ಓದಲು ಇಷ್ಟವಾಗುವಂತಿವೆ. ಅದರಲ್ಲೂ 'ಬಾಕಿ ಸಂಗ್ತಿ ಮೊಕ್ತಾ', 'ಮಳೆ', 'ಎಂಜಲು' ಕತೆಗಳು ನಮ್ಮ ಮನಮುಟ್ಟಿದರೆ, 'ಬಂಧನ', 'ಹಸಿರು ಬಿಂದೀ', 'ಬೈಟು ದೋಸೆ...' ನಮಗೆ ಖುಷಿ ನೀಡುವ ಕತೆಗಳಾಗಿ ಮೂಡಿಬಂದಿವೆ.

ಕುಸುಮಾ, ಬೆಜ್ಜವಳ್ಳಿ

'ಚಿಣ್ಣರ ಚಾವಡಿ'ಯಲ್ಲಿ ಬಂದ 'ಈ ರಸ್ತೆ ಎಲ್ಲಿಗೆ ಹೋಗುತ್ತದೆ?' ಈ ಕತೆ ತುಂಬಾ ಇಷ್ಟವಾಯಿತು ಹಾಗೂ ಅದು ಅರ್ಥಪೂರ್ಣವಾಗಿತ್ತು.

ದರ್ಶನ್, ಗಬಡಿ

ರಾಮಚಂದ್ರ ಭಾವೆ ಅವರ 'ಮಳೆ' ಕತೆ ನಮಗೆ ಬಹಳ ಕಾಲದಿಂದ ಬಾರದ ಮಳೆ ಬಂದಾಗ ಆಗುವ ಆನಂದವನ್ನು ಕೊಟ್ಟಿದೆ.

ಎನ್. ಮಹಾದೇವ, ಚೆನ್ನೈ

ವಿ. ಶ್ರೀನಿವಾಸರ ಕತೆ 'ಬಂಧನ' ಹಾಸ್ಯಮಯವಾಗಿ ಸಿ.ಎಸ್.ಪಿ.ಯವರ ಧಾಟಿಯಲ್ಲೇ ಓದಿಸಿಕೊಂಡು ಹೋಯಿತು.

'ಕೊಹಿಮ', ಬಸರಕೋಡು

'ಮಯೂರ' ಮಾಸದಿಂದ ಮಾಸಕ್ಕೆ ವರ್ಣರಂಜಿತವಾಗಿ ಬರುತ್ತಿದೆ.

ನೀಲಮ್ಮ ಕುಮಾರಪ್ಪ, ಲಿಂಗಸಗೂರು